PAPERS LAID ON THE TABLE

SRI R. GUNDU RAO (Chief Minister).—Sir, I beg to lay :

(a) Order No. DPAR 57 GAM 80, dated 16th March. 1981.
Visit of Sri S. M. Krishna, Former Minister for Commerce and Industries to European Countries regarding.

(b) Order No. DPAR 65 GAM 79, dated 16th March, 1981 Visit of Sri Veerashetty Kushnoor, Former Minister for Co-operation to Japan and other countries to participate in the Regional Seminar on "Better living Activities through Co-operatives" in Tokyo.

as required under Section 12 (2A) (b) of the Karnataka Ministers Salaries and Allowances Act, 1956.

SRI M. VEERAPPA MOILY (Minister for Finance and Tourism).—Sir, I beg to lay.—

Notification No. FD 195 CSL 80 dated 17th March, 1981.

Exemption of Sales Tax on "Leprosy Seals" printed by Manipur Power Press during the current year.

as required under Section 39 of the Karnataka Sales Tax Act, 1957.

SRI DHARMASINGH (Minister for Housing and Urban Development).—Sir, I beg to lay—

Notification No. HUD 600 MLR 78, dated 13th March, 1981.

The Karnataka Municipalities (Recruitment of Officers and Servants) (First Amendment) Rules, 1981,

as required under Section 323 (6) of the Karnataka Municipalities Act, 1964.

MR. SPEAKER.—Papers laid.

LEGISLATIVE BUSINESS

The Karnataka Civil and Small Causes Courts (Amendment) Bill, 1981.

Leave to Introduce

† SRI Y. RAMAKRISHNA (Minister for Law and Parliamentary Affairs).—Sir, I beg to move—

"That leave be granted to introduce the Karnataka Civil and Small Causes Courts (Amendment) Bill, 1981."

MR. SPEAKER.—The question is—

"That leave be granted to introduce the Karnataka Civil and Small Causes Courts (Amendment) Bill, 1981."

The motion was adopted and leave was granted

SRI Y. RAMAKRISHNA.—Sir, I introduce the Karnataka Civil and Small Causes Courts (Amendment) Bill, 1981.

MR. SPEAKER.—The Bill is introduced.

FINANCIAL BUSINESS

Reply to the discussion on the Budget for 1981-82

ಮಾನ್ಯ ಅಧ್ಯಕ್ಷರು.—ಈಗ ಬಜೆಟ್ ಭಾಷಣದ ಮೇಲಿನ ಚರ್ಚೆಗೆ ಮಾನ್ಯ ಹಣ ಕಾಸಿನ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ.

† ಶ್ರೀ ಎಂ. ವೀರಪ್ಪ ಮೊಯಿಲಿ (ಮಾನ್ಯ ಹಣಕಾಸಿನ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೆ, ೧೯೮೧–೮೨ನೇ ಸಾಲಿನ ಅಂದಾಜು ಪಟ್ಟಿಯನ್ನು ಈ ಸದನದ ಮುಂದೆ ಇಟ್ಟಾಗ ಈ ಸದನದ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರು ಅನೇಕ ಪ್ರಮುಖ ವಿಚಾರಗಳ ಮೇಲೆ ತಮ್ಮ ಸಲಹೆಯನ್ನು ಕೊಟ್ಟಿದ್ದಾರೆ. ಬೆಳಕನ್ನು ನೀಡಿದ್ದಾರೆ ಅದರ ಜೊತೆಯಲ್ಲಿ ಈ ಅಂದಾಜು ಪಟ್ಟಿಯಲ್ಲಿ ನಮೂದಿಸಿದಂತಹ ಧ್ಯೇಯ ಧೋರಣೆಗಳ ಬಗ್ಗೆ ಸಾಧಕ ಭಾದಕಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಸೂಚಿಸಿದ್ದಾರೆ. ಈ ಸಲಹೆಗಳು ನಾವು ನಾವು ಸದನದ ಮುಂದೆ ಇಟ್ಟಂತಹ ಅಂದಾಜು ಪಟ್ಟಿಯ ಮೇಲೆ ಮತ್ತು ಮುಂದೆ ಬರತಕ್ಕ ವರ್ಷದಲ್ಲಿ ನಾವು ಸಾಧಿಸ ತಕ್ಕ ಕಾರ್ಯಕ್ರಮಗಳ ಮೇಲೆ ಹೆಚ್ಚಿನ ಪರಿಣಾಮವನ್ನೂ ಕೂಡಾ ಬೀರುವುದಕ್ಕೆ ಸಾಧ್ಯವಿದೆ. ಮತ್ತು ನಾವು ಇಡತಕ್ಕ ಹೆಜ್ಜೆ. ಅದರಲ್ಲಿ ಹೆಚ್ಚಿನ ಬಲ, ಶಕ್ತಿಯನ್ನು ಈ ಸಲಹೆಗಳಿಂದ ಮತ್ತು ತಾವು ಕೊಟ್ಟಂತಹ ಅನೇಕ ಚಾರಗಳಿಂದ ಬೆಳಕಿಗೆ ಬರಲಿಕ್ಕೆ ಸಾಧ್ಯ ಇದೆ ಎಂದು ನಾನು ಹೇಳುತ್ತೇನೆ. ಈ ಬಗ್ಗೆ ನಾನು ಪ್ರಥಮವಾಗಿ ಎಲ್ಲಾ ಸದಸ್ಯರಿಗೂ ತಮ್ಮ ಮೂಲಕ ವಂದನೆಗಳನ್ನರ್ಪಿಸುವುದಕ್ಕೆ ಇಚ್ಛೆ ಪಡುತ್ತೇನೆ. ಈ ವರ್ಷ ತಾನೇ ನಮ್ಮ ಪಂಚವರ್ಷೀಯ ಯೋಜನೆ ಮಂಜೂರಾತಿಯನ್ನು ಪಡೆದು ನಾವು ದಾಪುಗಾಲು ಹಾಕಿ ಕರ್ನಾಟಕ ರಾಜ್ಯದ ಅಭಿವೃದ್ಧಿಯನ್ನು ಹೆಚ್ಚಿನ ಶಕ್ತಿಯುತವಾಗಿ ಸಾಧಿಸಬೇಕಾದ ಒಂದು ಹೆಜ್ಜೆಯಲ್ಲಿದ್ದೇವೆ. ಆ ಒಂದು ಹಂತದಲ್ಲಿ ಈ ಅಂದಾಜು ಪಟ್ಟಿಯನ್ನು ಈ ಸದನದ ಮುಂದೆ ಮಂಡಿಸಿದ ಕಾರಣ ಈ ವರ್ಷದ ಅಂದಾಜು ಪಟ್ಟಿ ಕರ್ನಾಟಕ ರಾಜ್ಯದ ಈ ೫ ವರ್ಷಗಳ ಒಂದು ಅಭಿವೃದ್ಧಿ ಪಥದಲ್ಲಿನ ಒಂದು ಮೈಲಿಗಲ್ಲು ಎಂದು ಹೇಳಿದರೆ ಹೆಚ್ಚಾಗುವುದಿಲ್ಲವೆಂದು ನನ್ನ ಭಾವನೆ. ಪಂಚವರ್ಷೀಯ ಯೋಜನೆಯ ಮುಖ್ಯ ಧ್ಯೇಯಗಳ ನಮ್ಮ ಸಮಾಜದಲ್ಲಿ, ತಮ್ಮ ರಾಜ್ಯದಲ್ಲಿ ಸಮಾಜ ವಾದವನ್ನು ವಸ್ತುಸಹಾಜಾರಿಗೆ ತರುವುದಕ್ಕೆ ಮಹತ್ವದ ಹೆಜ್ಜೆಯನ್ನು ಇಡಲಾಗಿದೆ. ಅದರ ಉದ್ದೇಶಗಳ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಅರ್ಮುಗಂ ಅವರು ಈಗಾಗಲೇ ಹೆಚ್ಚು ಪ್ರಕಟ ಪಡಿಸಿದ್ದಾರೆ. ಒಂದನೆಯದಾಗಿ ೬.೫ ಅಭಿವೃದ್ಧಿ ಪ್ರಮಾಣವನ್ನು ಸಾಧಿಸ ತಕ್ಕದ್ದು, ಎರಡನೆಯದಾಗಿ ೧೯೭೯–೮೦ರಲ್ಲಿ ಇರುವ ೧೧೮೫ ರೂ. ಗಳ ತಲಾ ವರಮಾನವನ್ನು ೧೯೮೦–೮೫ರೊಳಗೆ ೧೫೦೦ ರೂಪಾಯಿಗಳಿಗೆ ಏರಿಸುವುದು. ಮೂರನೆಯದಾಗಿ ವರಮಾನ ವಿತರಣೆಯಲ್ಲಿ ಇರುವ ಅಸಮತೆಯನ್ನು ಕಡಿಮೆ ಮಾಡುವುದು ಹಾಗೂ ನಾಲ್ಕನೆಯದಾಗಿ ದಾರಿದ್ರ್ಯ ರೇಖೆಗಿಂತ ಕೆಳಮಟ್ಟದಲ್ಲಿ ಜೀವನ ಮಾಡುತ್ತಿರತಕ್ಕಂತಹ ಜನರ ಜೀವನ ಮಟ್ಟವನ್ನು ಏರಿಸುವುದು. ಅನೇಕ ಸಂದರ್ಭದಲ್ಲಿ ಈ ಬಗ್ಗೆ ಟೀಕೆಗಳೂ ಬಂದಿದ್ದವು. ಶ್ರೀಮಾನ್ ಜೆ. ಎಚ್. ಪಾಟೀಲರೂ ಕೂಡಾ ನಮ್ಮ ಧ್ಯೇಯ ಧೋರಣೆಗಳ ವಿಚಾರವನ್ನು ಮಾತನಾಡುತ್ತಿರುವಾಗ ಇದೇನು ಗಾಂಧೀ ವಾದವೇ ಅಥವಾ ಮಾರ್ಕ್ಸ್ ವಾದವೇ ಎಂಬುದನ್ನು ಈ ಸರ್ಕಾರದ ಮುಂದೆ ಇಟ್ಟಿದ್ದಾರೆ. ತಮಗೆಲ್ಲರಿಗೂ ಗೊತ್ತಿದೆ ಅಧ್ಯಕ್ಷರೇ. ಈ ದೇಶದಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ಈ ದೇಶದ ಪ್ರಧಾನಿಯಾಗಿ, ವಿಶ್ವ ನಾಯಕಿಯಾಗಿ ಈ ದೇಶಕ್ಕೆ ವಾಸ್ತವಿಕವಾದ ಸಮಾಜ ವಾದವನ್ನು ಅದರಲ್ಲೂ ಕೂಡ ಬಡ ಜನರಿಗೆ. ದುರ್ಬಲ ವರ್ಗದವರಿಗೆ ಹೊಸ ಜೀವನದ ಕಲ್ಪನೆಯನ್ನು ಮಾಡತಕ್ಕ ಒಂದು ಕರೆಯನ್ನು ಕೊಟ್ಟಿದ್ದು ಮಾತ್ರ ಅಲ್ಲದೆ ಅದನ್ನು ಸರಳವಾಗಿ ಈ ಪಂಚ